ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 115-120
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಂದ್ರಮತಿಯ ವಿಲಾಪ

**ಡಾ.ವಾಮದೇವ ಎಚ್.ತಳವಾರ**
ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

***Abstract:***
*ಹರಿಶ್ಚಂದ್ರನ ಕಥೆ ಭಾರತೀಯ ಸೃಜನಶೀಲ ಪರಂಪರೆಯಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ರಾಮಾಯಣ ಮಹಾಭಾರತಗಳನ್ನು ಬಿಟ್ಟರೆ ಹರಿಶ್ಚಂದ್ರನ ಕಥೆಗೆ ಎರಡನೇ ಸ್ಥಾನವಿದೆ. ಸತ್ಯದ ಪರಿಪಾಲಕನಾದ ಹರಿಶ್ಚಂದ್ರ ನುಡಿದಂತೆ ನಡೆದು ಸತ್ಯವನ್ನು ಉಳಿಸಿಕೊಂಡ, ಇದರ ಫಲವಾಗಿ ತನ್ನ ಹೆಂಡತಿ ಮತ್ತು ಮಕ್ಕಳು ಶ್ರೀಮಂತಿಕೆಯಿಂದ ದೂರವಿರಬೇಕಾಯಿತು. ಹರಿಶ್ಚಂದ್ರನ ಹೆಂಡತಿಯಾದ ಚಂದ್ರಮತಿ ಮತ್ತು ಮಗನಾದ ಲೋಹಿತಾಶ್ವನನ್ನು ಒತ್ತೆ ಇಟ್ಟ ಮನೆಯಲ್ಲಿ ಅವರು ಕೊಡುತ್ತಿದ್ದ ಕಷ್ಟ, ಹಿಂಸೆ ನೋವುಗಳನ್ನು ಹರಿಶ್ಚಂದ್ರನ ಸತಿಸುತರು ಅನುಭವಿಸುತ್ತಿರುವುದನ್ನು ಈ ಚಂದ್ರಮತಿಯ ವಿಲಾಪವು ಇಂದಿನ ಆಧುನಿಕ ಸಂದರ್ಭದಲ್ಲಿ ಅನೇಕ ಆಯಾಮಗಳಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.*

***Keywords:*** *ಕನ್ನಡ ಸಾಹಿತ್ಯ, ರಾಘವಾಂಕ, ಹರಿಶ್ಚಂದ್ರ ಕಾವ್ಯ, ಚಂದ್ರಮತಿ, ಲೋಹಿತಾಶ್ವ.*

**ಪೀಠಿಕೆ**

ಹರಿಶ್ಚಂದ್ರನ ಕಥೆ ಭಾರತೀಯ ಸೃಜನಶೀಲ ಪರಂಪರೆಯಲ್ಲಿ ಹೆಚ್ಚು ಮಹತ್ವವನ್ನು ಪಡೆದು ಕೊಂಡಿದೆ. ರಾಮಾಯಣ ಮಹಾಭಾರತಗಳನ್ನು ಬಿಟ್ಟರೆ ಹರಿಶ್ಚಂದ್ರನ ಕಥೆಗೆ ಎರಡನೇ ಸ್ಥಾನವಿದೆ. ಹರಿಶ್ಚಂದ್ರನ ಹೆಂಡತಿಯಾದ ಚಂದ್ರಮತಿ ಮಗ ಲೋಹಿತಾಶ್ವ ಇನ್ನೊಬ್ಬರ ಮನೆಯಲ್ಲಿ ಕೆಲಸ ಮಾಡಿ ಕೊಂಡಿರುವ ಪರಿಯನ್ನು ಕವಿ ರಾಘವಾಂಕ ಬಹಳ ಮಾರ್ಮಿಕವಾಗಿ ಹೇಳಿದ್ದಾನೆ. ಹರಿಶ್ಚಂದ್ರ ಚಾರಿತ್ರ್ಯವು ರಾಜನ ಸತ್ಯ, ರಾಜತ್ವದ ಸತ್ಯ, ಊಳಿಗಮನಶಾಹಿ, ಪ್ರಭುತ್ವದ ಸತ್ಯ ಹಾಗೂ ಪುರುಷನಿಷ್ಠ ಸತ್ಯವನ್ನು ನಿರೂಪಿಸಲು ಮತ್ತು ಮಂಡಿಸಲು ಹೆಣಗುತ್ತಿದೆ. ಹೆಂಡತಿ ಮಕ್ಕಳನ್ನು ಸಾಲದ ಕಾರಣಕ್ಕಾಗಿ ಮಾರಿಕೊಂಡಾಗ ಚಂದ್ರಮತಿ ಲೋಹಿತಾಶ್ವರು ಪಡುವ ನೋವಿನ ಬವಣೆ ಕೇಳುಗರ ಮನ ಕಲಕುವಂತಿದೆ.

ಚಂದ್ರಮತಿ ಇದ್ದ ಮನೆಯ ಒಡೆಯ ಮಹಾ ಕೋಪಿ ಆತನ ಹೆಂಡತಿ ಬುದ್ಧಿ ಇಲ್ಲದವಳು. ಮಗ ತುಂಬಾ ಕೆಟ್ಟವನು ಸೊಸೆಯಾದರೋ ತುಂಬಾ ನಿಷ್ಠುರೆ ಆ ಮನೆಯ ಉಳಿದವರೂ ದುರ್ಜನರು. ನೆರೆಮನೆಯವರು ಸುಳ್ಳನ್ನು ಸಾಧಿಸುವವರು. ಆ ಮನೆಯ ಹಸುಗಳು ತುಂಟತನದವು ಮಾತು ಮಾತಿಗೆ ಕೋಪಿಸುವ ಸಾಯುವಂತೆ ಸದೆಬಡಿಯುವ ಕೆಟ್ಟ ಮಾತನಾಡುವ ಹಿಂಸಿಸುವ ಜಗಳ ಕಾಯುವ ತಪ್ಪನ್ನು ಸಾಧಿಸುವ ಬೀಳುವಂತೆ ಒದೆಯುವ ಮಾರಿಗೆ ಸಹಿಸಲಾರದೆ ಹರಿಶ್ಚಂದ್ರನ ಸತಿಸುತರು ಸತ್ತು ಹುಟ್ಟುತ್ತಿದ್ದರು.

***Please cite this article a:*** ವಾಮದೇವ ಎಚ್. ತಳವಾರ. (2023). ಚಂದ್ರಮತಿಯ ವಿಲಾಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(1), 115–120.

ಇಲ್ಲಿ ಹರಿಶ್ಚಂದ್ರನ ಸತಿಸುತರು ಒತ್ತೆ ಇದ್ದ ಮನೆಯ ಜನರು ಅವರ ನಡವಳಿಕೆ ಆ ಮನೆಯ ಸುತ್ತ ಮುತ್ತಲಿನ ಜನರ ನಡವಳಿಕೆ ಆ ಮನೆಯ ಹಸುಗಳು ತುಂಟತನದವು. ಒಂದೊಂದು ಮಾತಿಗೂ ಕೋಪಿಸುವ ಕೆಟ್ಟ ಮಾತನಾಡುವ ಹಿಂಸಿಸುವ ಎಲ್ಲಾ ವಿಷಯಕ್ಕೂ ಜಗಳವನ್ನು ಮಾಡುವಂತಹ ಹಿಂಸಿಸುವ ಒಡೆದರೆ ಬೀಳುವ ಹಾಗೆ ಒಡೆಯುವ ಒಟ್ಟಿನಲ್ಲಿ ಕಷ್ಟಗಳ ಕೂಪ ಈ ಮನೆಯಲ್ಲಿ ಹರಿಶ್ವಂದ್ರನ ಸತಿಸುತರು ಪ್ರತಿದಿನ ಸತ್ತು ಹುಟ್ಟಿದ್ದಾರೆ ಎಂದು ಕವಿ ಈ ನಾಲ್ಕು ಸಾಲುಗಳಲ್ಲಿ ಆ ಮನೆಯ ಪರಿಸರವನ್ನು ನಮ್ಮ ಕಣ್ಣಿಗೆ ಕಟ್ಟುವ ಹಾಗೆ ನಮ್ಮ ಮುಂದೆಯೇ ನಡೆಯುತ್ತಿದೆ ಎಂಬ ರೀತಿಯಲ್ಲಿ ಬಹಳ ಸರಳವಾಗಿ ನಾವೆ ಈ ನೋವನ್ನು ಅನುಭವಿಸುತ್ತಿದ್ದೇವೆ ಎಂಬ ಭಾವಕ್ಕೆ ನಮ್ಮನ್ನು ಈ ಪದ್ಯದಲ್ಲಿ ಕರೆದುಕೊಂಡು ಹೋಗುತ್ತಿದೆ ಅಷ್ಟೆ ಚೆನ್ನಾಗಿ ಕವಿ ಚಂದ್ರಮತಿಯ ಕೆಲಸದ ಮನೆಯ ಪರಿಸರವನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ.

ಒಂದೇ ಸಮನಾಗಿ ಹಲವು ಸಲ ಒಡೆಯನ ಅರಮನೆಗೆ ನೀರು ತುಂಬಿ ಕೊಟ್ಟೆಷ್ಟೋ ಬತ್ತವನ್ನು ಕುಟ್ಟಿ ಹೊಟ್ಟೆಗೆ ಊಟ ಕೊಟ್ಟರೆ ಎಷ್ಟಿಡುವರೂ ಅಷ್ಟನ್ನೇ ಏನಿಡುವರೋ ಅದನ್ನೇ ಊಟ ಮಾಡಿ ರಾತ್ರಿ ಹಗಲು ಎನ್ನದೆ ಒಂದೇ ಸಮನಾಗಿ ದುಡಿಯುವ ಸತಿಯ ಕುಮಾರನು ಉದಯದಲ್ಲಿ ಎದ್ದು ಹೋಗಿ ಕಾಡಿನಲ್ಲಿ ಹುಲ್ಲು ಮತ್ತು ಕಟ್ಟಿಗೆಯನ್ನು ತೆಗೆದುಕೊಂಡು ನಿತ್ಯ ಬೆಳಗ್ಗೆ ಹೋಗಿದ್ದರೆ ಸಂಜೆ ತನ್ನ ಜೊತೆಗಾರರೊಂದಿಗೆ ಬರುತ್ತಿದ್ದ. ಹೀಗೆ ಕಾಲ ಕಳೆಯಲು, ಚಂದ್ರಮತಿ ಒಂದೇ ಸಮನಾಗಿ ಬಿಡುವಿಲ್ಲದೆ ಆ ಮನೆಗೆ ನೀರನ್ನು ತೋಡುತ್ತಾ, ಕೊಟ್ಟಷ್ಟು ಬತ್ತವನ್ನು ಕುಟ್ಟುತ್ತಾ ಎಷ್ಟು ಊಟ ಕೊಡುವರೋ ಅದನ್ನೇ ತಿಂದು ಹಗಲು ರಾತ್ರಿ ಎನ್ನದೇ ಒಂದೇ ಸಮನಾಗಿ ಚಂದ್ರಮತಿ ದುಡಿಯುವಳು. ಇನ್ನು ಮಗ ಆ ಚಿಕ್ಕ ಹುಡುಗ ಸೂರ್ಯೋದಯಕ್ಕೆ ಮೊದಲೆ ಎದ್ದು ಕಾಡಿಗೆ ಹೋಗಿ ಹುಲ್ಲು ಮತ್ತು ಕಟ್ಟಿಗೆಯನ್ನು ತೆಗೆದುಕೊಂಡು ಬರುವ ಹೊತ್ತಿಗೆ ಸಂಜೆ ಆಗುತ್ತಿತ್ತು. ಈ ರೀತಿ ಪ್ರತಿದಿನ ಹರಿಶ್ಚಂದ್ರನ ಸತಿಸುತರು ಕಾಲ ಕಳೆಯುತ್ತಿದ್ದರು. ಚಂದ್ರಮತಿ ಲೋಹಿತಾಶ್ವರು ಪಡುವ ಪಾಡಂತೂ ಶೋಕರಸದ ಹೊನಲನ್ನೇ ಹರಿಸುತ್ತದೆ. ಇವರಿಬ್ಬರೂ ಕಷ್ಟಕ್ಕೆ ಗುರಿಯಾದಷ್ಟು ಹರಿಶ್ಚಂದ್ರನ ವ್ಯಕ್ತಿತ್ವ ಉಜ್ವಲಗೊಳ್ಳುತ್ತಲೇ ಹೋಗುತ್ತದೆ. ಕರುಣರಸದ ಕೊಂಡಿಯಲ್ಲಿ ಕೃತಿ ಕಲಾತ್ಮಕವಾಗಿ ತೆರೆದುಕೊಳ್ಳುತ್ತಲೇ ವಾಸ್ತವ ಬದುಕು ಕೊಚ್ಚಿಕೊಂಡು ಹೋಗುತ್ತದೆ.

ಮನೆಯಲ್ಲಿ ಕಸ ಎಲ್ಲಾದರೂ ಇದ್ದರೆ ಚಂದ್ರಮತಿಯನ್ನೇ ಬೈಯುವರು ಹಾಲು ಕರೆಯಲು ಚಂದ್ರಮತಿ ಹೋದರೆ ಆ ಹಸುಗಳು ಒದೆಯುವುವು ಆ ಮನೆಯ ಸೊಸೆ ತನ್ನ ಬೆನ್ನನ್ನು ಚಂದ್ರಮತಿ ಒರೆಸಲಿ ಎಂದು ಒಡೆಯುವಳು, ಆ ಕೆಟ್ಟ ಮಗ ತನ್ನ ಕಾಲನ್ನು ಸರಿಯಾಗಿ ತೊಳೆಯುವುದಿಲ್ಲವೆಂದು ಅವಳಿಗೆ ಒಡೆಯುವನು ಅಕ್ಕಪಕ್ಕದ ಮನೆಯವರು ಚಂದ್ರಮತಿಯನ್ನು ಕಳ್ಳಿ ಎಂದು ಚಾಡಿ ಹೇಳುವರು. ಅದರಿಂದ ಆ ಮನೆಯ ಒಡತಿ ಚಂದ್ರಮತಿಯನ್ನು ಒಡೆಯುವಳು ಈ ಮನೆಯ ಎಲ್ಲರ ಕೈಯಲ್ಲಿ ಒದೆ ತಿಂದು ಅವರು ಕೊಟ್ಟ ಕೆಲಸ ಮಾಡಿ ಇದೆಲ್ಲದರ ಜೊತೆಗೆ ಪುತ್ರಶೋಕ ಚಂದ್ರಮತಿಯನ್ನು ಕಾಡುತ್ತಿತ್ತು. ಇದರಲ್ಲಿ ಆ ಮನೆಯವರು ಕೊಡುತ್ತಿರುವ ಕಷ್ಟವನ್ನು ಸಹಿಸಲಾರದೆ ಸಹಿಸುತ್ತಿವಳು ಚಂದ್ರಮತಿ ಎಂದು ಕವಿ ಈ ಸಂಕಷ್ಟವನ್ನು ಹೇಳುತ್ತಿದ್ದಾನೆ.

ಒಂದೇ ಸಮನಾಗಿ ಈ ಕಷ್ಟಗಳಿಂದ ಹೆದರಿ ಕಂಗೆಟ್ಟು ಓಡಿ ಹೋಗುವಂತಿಲ್ಲ ಇರುವುದಕ್ಕು ಆಗುತ್ತಿಲ್ಲ ಸಾಯುವುದಕ್ಕೂ ಆಗುತ್ತಿಲ್ಲ ಬದುಕುವುದು ಆಗುತ್ತಿಲ್ಲ ತನಗೆ ಬರುವ ಕಷ್ಟಗಳಿಗೆ ಸಾಕ್ಷಿಯಾಗಿ ಕಷ್ಟಗಳನ್ನು ಹೇಳಿಕೊಳ್ಳಲು ಯಾರೂ ಇಲ್ಲದಿರುವುದರಿಂದ ತಾನೊಬ್ಬಳೆ ಆ ದುಃಖವನ್ನು ಅನುಭವಿಸುತ್ತಾ ತನ್ನೊಳಗೆ ತಾನೆ ತಡೆದುಕೊಂಡು ತನ್ನ ಕುಮಾರನಿಗೆ ಬಂದ ಕಷ್ಟಗಳನ್ನೆಲ್ಲ ಸಹಿಸುತ್ತಾ ಇರುವಳು. ಆ ಕಷ್ಟವನ್ನು ಕೇಳಲು ಯಾರು ಇಲ್ಲವೆಂದು ಕವಿ ಹೇಳುವ ಸನ್ನಿವೇಶ ಮಾರ್ಮಿಕವಾಗಿದೆ. ಯಾವ ಒಬ್ಬ ಜೀವಿಯೂ

ಚಂದ್ರಮತಿಯ ದುಃಖವನ್ನು ಕೇಳಲು ಇಲ್ಲ ತಾನೆ ಎಲ್ಲವನ್ನು ತನ್ನ ಮನಸ್ಸಿಗೆ ಹೇಳಿಕೊಳ್ಳುತ್ತಾ ತಾಳ್ಮೆಯಿಂದ ಇರುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಬಿಂಬಿಸಿದ ಮೌಲ್ಯಗಳನ್ನೇ ತನ್ನ ಮೌಲ್ಯಗಳೆಂದು ಭಾವಿಸಿದ್ದ ಚಂದ್ರಮತಿ ಇಲ್ಲಿಯೂ ತಾನೇ ಮುಂದೆ ಬಂದು ಮರುಳೇ ಸರ್ವಕ್ಕೆ ಮೊದಲು ಸತಿಸುತರು ತನ್ನ ಒಡಲು ಕಡೆ ನೇಮಕ್ಕೆ ಸತ್ಯಕ್ಕೆ ಬಂಧನಕ್ಕೆ ಎಡೆಯೊಳ್ಪಲು ಶಿವ ಮನಂ ಸೋಳ್ಪನ್ನೆ ಲಜ್ಜೆಗೆಡದಮ್ಮ ಮರುಮತ್ತಾದು ದಾಗಲಿ ಎಂದು ಹೇಳುತ್ತಾಳೆ. ಅಷ್ಟರಮಟ್ಟಿಗೆ ರಾಘವಾಂಕ ಈ ಕಥೆಯನ್ನು ಚಿತ್ರಿಸಿದ್ದಾನೆ.

ಇಷ್ಟೆಲ್ಲ ಕಷ್ಟಗಳ ನಡುವೆ ಪ್ರತಿ ದಿನ ಉದಯಕಾಲದಲ್ಲಿ ಎದ್ದು ಹುಲ್ಲು ಮತ್ತು ಕಟ್ಟಿಗೆ ಎಂದು ಕಾಡಿಗೆ ನಡೆದನು ಅಲ್ಲಲ್ಲಿ ತಿರುಗಿ ಹಲವು ರೀತಿಯ ಸೌದೆಯನ್ನು ಆಯ್ದು ಒಂದೆಡೆ ಹಾಕಿ ಹೊರೆಕಟ್ಟಿ ಹೊತ್ತುಕೊಂದು ತನ್ನ ಜೊತೆಯ ಮಕ್ಕಳೊಡನೆ ಹೊರಟು ಬರಲು ಆ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಸುಸ್ತಾಗಿ ಶಕ್ತಿಯಿಲ್ಲದೆ ತಲೆತಿರುಗಿ ನಡೆಯಲು ಆಗದೆ ಬಾಯಾರಿಕೆಯಿಂದ ಬೆವರಿ ಬಿಸಿಲಿನಿಂದ ತಲೆಸುಡಲು ಆ ತೂಕ ಹೊತ್ತುಕೊಂದು ನಡೆಯಲು ಆಗದೆ ಏದುಸಿರು ಬಿಡುತ್ತಾ ನಡೆದುಕೊಂಡು ಹರಿಶ್ಚಂದ್ರನ ಮಗ ಸಣ್ಣ ಬಾಲಕ ಬರುತ್ತಿರುವನು ಎಂದು ಹೇಳುತ್ತಿದ್ದಾರೆ. ಈ ಕಷ್ಟವನ್ನು ಮನ ತಟ್ಟುವ ಹಾಗೆ ಅಯ್ಯೋ ಪಾಪ ಎನ್ನುವ ಮಟ್ಟಿಗೆ ಭಾಷೆಯನ್ನೂ ಬಳಸಿ ಸುಲಭವಾಗಿ ಆ ಕಷ್ಟವನ್ನೆಲ್ಲ ಅರ್ಥವಾಗುವ ಹಾಗೆ ಹೇಳಿದ್ದಾರೆ.

ಹೀಗೆ ನಡೆಯಲು ಆಗದೆ ನಡೆದುಕೊಂಡು ದಾರಿಯಲ್ಲಿ ಬರುತ್ತಿರುವಾಗ ದಾರಿ ಪಕ್ಕದಲ್ಲೇ ಹುತ್ತದ ಮೇಲೆ ಬಹಳ ಚೆನ್ನಾಗಿ ಬೆಳೆದುನಿಂತಿದ್ದ ಎಳೆಯ ಹುಲ್ಲನ್ನು ಲೋಹಿತಾಶ್ವನು ನೋಡಿ ಅದನ್ನು ಬಯಸಿ ನಾನು ಇವೆಲ್ಲವನ್ನು ಬೇಗನೆ ಕೊಯ್ದು ತೆಗೆದುಕೊಂಡು ಹೋದರೆ ನನ್ನ ಮನೆಯ ಒಡೆಯ ಕೋಪಿಸಿಕೊಳ್ಳದೆ ಸಂತೋಷಪಡುವನು ಎಂಬ ಉದ್ದೇಶದಿಂದ ಆಸೆಯಿಂದ ಸೌದೆಯ ಹೊರೆಯನು ಕೆಳಗೆ ಹಾಕಿ ಕುಡಿಗೋಲು ಹಿಡಿದು ಪಶ್ಚಿಮ ಬೆಟ್ಟವನ್ನು ಹತ್ತಿ ಸೂರ್ಯನಂತೆ ಹೋದನು. ದೈಹಿಕವಾಗಿ ಬಹಳ ನಿಶಕ್ತನಾದರೂ ಒಡೆಯನು ಕೋಪಗೊಳದೆ ಸಂತೋಷದಿಂದ ಇರುವರು ಎಂಬ ಉದ್ದೇಶದಿಂದ ಪಶ್ಚಿಮದ ಬೆಟ್ಟವನ್ನು ಸೇರುತ್ತಿರುವ ಸೂರ್ಯನಂತೆ ಸಾವಿನ ಕೂಪಕ್ಕೆ ಹೋದನು ಎಂದು ಕವಿಯು ಪಶ್ಚಿಮದಲ್ಲಿ ಇರುವ ಬೆಟ್ಟವನ್ನು ಸೂರ್ಯನಿಗೆ ಹೋಲಿಸಿದ್ದಾರೆ.

ಹುತ್ತದ ಸುತ್ತಲು ಇದ್ದ ಪೊದೆಯನ್ನು ಕಡಿದು ಹುತ್ತವನ್ನು ಹತ್ತಿ ಒಂದು ಹಿಡಿ ಹುಲ್ಲನ್ನು ಬಿಡದೆ ಕತ್ತರಿಸಿ ಕೈಯಲ್ಲಿ ತೆಗೆದುಕೊಳ್ಳುತ್ತಿರಲು ಕೈಯ ಮಣಿಗಟ್ಟನ್ನು ತಕ್ಷಣವೇ ಕಚ್ಚಿ ಬುಸುಗುಟ್ಟುತ್ತಾ ತಕ್ಷಣವೇ ಬಂದ ರೌದ್ರಸರ್ಪವನ್ನು ಕಂಡು ಹೆದರಿ ತಕ್ಷಣವೇ ಹಾರಿಕೈಕಾಲನ್ನು ಕೆದರಿ ಕತ್ತು ಕೆಳಗಾಗಿ ಅಯ್ಯಯ್ಯೋ ಮದವುಂತಾದ ರಾಹುವಿನ ಕೈಗೆ ಸಿಕ್ಕ ಬಾಲಚಂದ್ರ ಬಿಂಬವು ನೆಲಕ್ಕೆ ಬೀಳುವಂತೆ ಲೋಹಿತಾಶ್ವನು ಬಿದ್ದನು. ಲೋಹಿತಾಶ್ವನನ್ನು ರಾಹುವಿನ ಕೈಗೆ ಸಿಕ್ಕ ಬಾಲಚಂದ್ರನ ಬಿಂಬಕ್ಕೆ ಹೋಲಿಸಿ ಆ ಕಷ್ಟವನ್ನು ಹೇಳಿದ್ದಾನೆ.

ಹಾವಿನ ಜೊತೆ ಅವನು ಬೀಳಲು ಅವನ ಜೊತೆಗಾರರು ಹೆದರಿ ಅವನನ್ನು ಬಿಟ್ಟು ಊರಿನ ಕಡೆಗೆ ಓಡಿ ಹೋದರು. ಇತ್ತ ಲೋಹಿತಾಶ್ವ ತಾಯಿಗಾಗಿ ಹಂಬಲಿಸಿ ತಂದೆಯನ್ನು ನೆನೆದು ಜೋರಾಗಿ ತಂದೆಯನ್ನು ಕರೆದು ದಿಕ್ಕುದಿಕ್ಕಿಗೆ ಬಾಯನ್ನು ಬಿಟ್ಟು ನೆತ್ತಿಗೇರಿದ ವಿಷದಿಂದ ಮಡಿದನು. ಕಾಡಿನಲ್ಲಿ ಲೋಹಿತಾಶ್ವ ಮಡಿದರೆ ಅಲ್ಲಿ ಮಗ ಬರಲಿಲ್ಲವಲ್ಲ ಎಂದು ತಾಯಿ ಸಂಕಟವುಂಟಾಗಿ ರವಿ ಅಂದು ಪಶ್ಚಿಮದ ಸಮುದ್ರಕ್ಕೆ ಬಿದ್ದನು. ಲೋಹಿತಾಶ್ವ ಸತ್ತು ಬಿದ್ದನು ವಿಷ ತಲೆಗೆ ಏರಿ ಸೂರ್ಯ ಅಂದು ಪಶ್ಚಿಮದ ಸಮುದ್ರಕ್ಕೆ ಬಿದ್ದಿತು. ಹಾಗೆ ಲೋಹಿತಾಶ್ವನ ಕಥೆಯು ಮುಗಿಯಿತು ಎಂದು ಸೂರ್ಯನಿಗೆ ಹೋಲಿಸಿದ್ದಾನೆ.

ಇಲ್ಲಿ ಕಾಡಿನಲ್ಲಿ ಲೋಹಿತಾಶ್ವ ಹಾವು ಕಚ್ಚಿ ಸತ್ತು ಬಿದ್ದಿರಲೂ ಮಗ ಇಷ್ಟು ಹೊತ್ತಾದರೂ ಬರಲಿಲ್ಲವಲ್ಲ ಎಂದು ಸಂಕಟ ಪಡುತ್ತಿದ್ದಳು. ಈ ದಿನ ಯಾಕೆ ತಡ ಮಾಡುತ್ತಿದ್ದಾನೆ ನನ್ನ ಕಂದ ಎಂದು ಶಪಿಸುತ್ತಾ ನಿಟ್ಟುಸಿರು ಬಿಡುತ್ತಾ ಮರುಗುತ್ತ ಹೊಟ್ಟೆಯನ್ನು ಉಜ್ಜಿಕೊಳ್ಳುತ್ತಾ ಕೊನೆ ಬೆರಳನ್ನು ಮುರಿದುಕೊಳ್ಳುತ್ತಾ ತನ್ನ ದೇಹವನ್ನು ಮರೆತು ಹೆಜ್ಜೆ ಹೆಜ್ಜೆಗೆ ಹೊರಗಿನ ಶಬ್ದವನ್ನು ಆಲಿಸುತ್ತಾ, ಮತ್ತೆ ಮನೆಯ ಯಜಮಾನನಿಗೆ ಹೆದರಿ ಕೆಲಸವನ್ನು ಮಾಡುತ್ತಿರುವ ಚಂದ್ರಮತಿಯು ಈ ವಿಷಯದ ಬಗ್ಗೆ ಆಲಿಸದೆ, ಕೆಟ್ಟ ಮಾತುಗಳಿಂದ ಗದರಿಸುತ್ತಿದ್ದರು. ಅದನ್ನು ಏನೆಂದು ಹೇಳಲು ಆಗುತ್ತಿಲ್ಲ ಚಂದ್ರಮತಿ ತನ್ನ ಮಗ ಬರುವಿಕೆಗಾಗಿ ಕಾಯುತ್ತಿದ್ದು ಅದೇ ಯೋಚನೆಯಲ್ಲಿ ಮರುಗುತ್ತ ನಿಟ್ಟುಸಿರು ಬಿಡುತ್ತಾ ಕೆಲಸವನ್ನು ಮಾಡಲು ಆಗದೆ ಆ ಮನೆಯ ಹೆಂಗಸಿಗೆ ಹೆದರಿ ಕೆಲಸವನ್ನೇ ಮಾಡುತ್ತಿರುವುದನ್ನು ಕಾಣಬಹುದು.

ಚಂದ್ರಮತಿಯು ಮಗಳ ಯೋಚನೆಯಿಂದ ಬರಲಿಲ್ಲವೆಂದು ಹೊರಗಡೆ ಬಂದರೆ ಓಡಿಹೋಗುವಳು ಎನ್ನುವರು. ಮೆಲ್ಲನೆ ಅಳುತ್ತಿದ್ದರೆ ಅಮಂಗಳ ಮಾಡುತ್ತಿದ್ದಾಳೆ ಎನ್ನುವರು. ಒಳಗೊಳಗೇ ಮಗನ ಗುಣಗಳನ್ನು ನೆನೆದರೆ ಬೈಯುವಳು ಎನ್ನುವರು. ಯೋಚಿಸುತ್ತಾ ನಿಂತಿದ್ದಾರೆ ಕೆಲಸಗಳಲ್ಲಿ ಎನ್ನುವರು. ಒಮ್ಮೊಮ್ಮೆ ನಿಟ್ಟುಸಿರು ಬಿಟ್ಟರೆ ಬೇಸತ್ತಳು ಎಂದೆನ್ನುವರು. ಹೀಗೆ ಚಂದ್ರಮತಿಯನ್ನು ಆ ಮನೆಯ ಜನರು ಬೈಯುವರು ಹೇಗಿದ್ದರು ಅವಳನ್ನು ಬೈಯುವರು ಅಂತಹ ಪರಿಸ್ಥಿತಿ ಚಂದ್ರಮತಿಯ ಪರಿಸ್ಥಿತಿ ಆಗಿತ್ತು. ಚಂದ್ರಮತಿಯದು ಕರುಣಾಜನಕ ಪರಿಸ್ಥಿತಿಯಾಗಿತ್ತು ಎಂದು ಇಲ್ಲಿ ಹೇಳುತ್ತಿದ್ದಾರೆ.

ರಾಘವಾಂಕನ ಈ ಕಥೆಯ ಹಂದರದಲ್ಲಿ ನಿರ್ಜೀವ ಭೂಮಿಗೂ ಜೀವವಿರುವ ಹೆಣ್ಣಿಗೂ ಕಲ್ಪಿಸುವ ಅತಾರ್ಕಿಕ ಸಮೀಕರಣದಲ್ಲಿಯೇ ಮಹಿಳೆಯ ಶೋಷಣೆಯ ಅಸಂಖ್ಯಾ ಆಯಾಮಗಳು ಎಗ್ಗಿಲ್ಲದೇ ತೆರೆದುಕೊಳ್ಳುತ್ತವೆ. ಭೂಮಿಯಷ್ಟೇ ನಿರ್ಧಯವಾಗಿ ಹೆಣ್ಣನ್ನು ದುಡಿಸಿಕೊಳ್ಳುವ ಸಮಾಜದ ಮೊಹನತ್ತನ್ನು ಕವಿ ಹೇಳಿದ್ದಾನೆ.

ದೇಹದ ಒಳಗೆ ಮುರಿದ ಬಾಣದ ಗಾಯದ ರೀತಿಯಂತೆ ಹೊರಗೆ ಕಾಣಿಸಿಕೊಳ್ಳದೆ ಒಳಗೊಳಗೆ ಬೇಯುವ ಕುಂಬಾರನ ಒಲೆಯ ಬೆಂಕಿಯಂತೆ ಸ್ನೇಹ ಬೆಳೆಸಿದ ಶತ್ರುಗಳ ಒಳಗಿನ ಮುಳಿಸಿದಂತೆ, ಮನೆಯವರ ತೊಂದರೆಗೆ ಹೆದರಿ ದುಃಖ ಬೆಳೆದು ಒಳಗೊಳಗೆ ತನ್ನ ದುಃಖವನ್ನು ಮುಚ್ಚಿಡುತ್ತಾ ಚಂದ್ರಮತಿಗೆ ಮಗ ಬರಲಿಲ್ಲವಲ್ಲ ಎಂಬ ಭಯದಿಂದ ತನ್ನ ದೇಹದಲ್ಲಿ ಬರಿಯುವಂತಾದ ಎದೆ ಬಿಕ್ಕುವ ನಡುಗುವ ಪಕ್ಕೆಗಳ ಕಣ್ಣೊಳಗೆ ಬಸರಿದ ನೀರು ರಕ್ತನಾಲಗಳು ಉಬ್ಬಿ ಬಿಗಿದು ಗಂಟಲಿನಲ್ಲೇ ಮುಕ್ಕುಳಿಸಿದ ಅಳು ಇವುಗಳಿಂದ ಕೂಡಿದ ಚಂದ್ರಮತಿಯ ದುಃಖ ಸೀಗೆ ಬೇಲಿಯ ಮಧ್ಯ ಬೆಳೆದ ಹೋವಾಯಿತು. ಚಂದ್ರಮತಿಯ ದುಃಖವನ್ನು ದೇಹದ ಒಳಗೆ ಮುರಿದ ಬಾಣ ಹೇಗೆ ದಾಯ ಹೊರಗೆ ಕಾಣಿಸಿಕೊಳ್ಳದೆ ಇರುವುದೊ ಹಾಗೆ ಅವಳ ನೋವು ಒಳಗೆ ಇದೆ ಆದರೆ ಈಚೆ ಕಾಣಿಸುತ್ತಿಲ್ಲ. ಕುಂಬಾರ ಮಡಿಕೆ ಮಾಡುವ ಬೆಂಕಿ ಹೇಗೆ ಹೊರಗೆ ಕಾಣಿಸುವುದಿಲ್ಲವೋ ಹಾಗೆ ಚಂದ್ರಮತಿಯ ದುಃಖವನ್ನು ಹಿತಶತ್ರುಗಳು ಒಳಗೆ ಯಾವ ರೀತಿ ಕೇಡುಬಯಸುವುದು ತಿಳಿಯುವುದಿಲ್ಲವೋ ಹಾಗೆ ಚಂದ್ರಮತಿಯ ಪುತ್ರಶೋಕ ಹೊರಗೆ ಹೇಳಲಾಗದೆ ದುಃಖ ಬೆಳೆದು ನಿಂತಿದೆ ಅವಳ ದುಃಖವನ್ನು ಈ ಮೂರು ರೀತಿಯಲ್ಲಿ ಹೋಲಿಸಿದ್ದಾರೆ. ಹಾಗೆ ಅವಳ ದೇಹದಲ್ಲಿ ದುಃಖವನ್ನು ಸಹಿಸಲಾರದ ಬಿರಿಯುವಂತಹ ಎದೆ ನಡುಗುವ ದೇಹ ಬಿಕ್ಕಳಿಸುವ ಅಳು ಒಂದೇ ಸಮನೆ ಸುರಿಯುವ ಕಣ್ಣಿರು ಉಸಿರುಗಟ್ಟಿಸುವ ಅಳು ಚಂದ್ರಮತಿಯ ದುಃಖ ಇವುಗಳಿಂದ ಕೂಡಿ ದೇಹದಲ್ಲಿ ಈ ಬದಲಾವಣೆಗಳು ಆಗಿವೆ. ಚಂದ್ರಮತಿಯನ್ನು ಕವಿಯೂ ಮುಳ್ಳಿನ ಮಧ್ಯೆ ಬೆಳೆಯುವ ಸುಂದರವಾದ ಹೂವಿಗೆ ಹೋಲಿಸಿದ್ದಾರೆ. ಈ ರೀತಿ ಆ ಕೆಟ್ಟ ಜನರ ನಡುವೆ ಚಂದ್ರಮತಿ ಎಲ್ಲ

ಕಷ್ಟಗಳನ್ನು ಹಿಂಸೆಯನ್ನು ಮಗನ ನೋವನ್ನು ಅನುಭವಿಸುತ್ತಾಳೆ.

ಚಂದ್ರಮತಿಯು ತನ್ನ ಮಗ ಇಷ್ಟು ಹೊತ್ತಾದರೂ ಇನ್ನೂ ಬರಲಿಲ್ಲವಲ್ಲ ಎಂದು ಹೆದರಿ ಏನಾದರೂ ತೊಂದರೆಗೆ ಒಳಗಾಗಿದ್ದನಾ ಎಂದು ಯೋಚಿಸುತ್ತಾಳೆ. ಉರಿಯುವ ಬಿಸಿಲಿನಲ್ಲಿ ಹಸಿದು ಬಳಲಿ ಶಕ್ತಿಗುಂದಿ ಬಿದ್ದಿಬರುವನೋ, ಸೇವಕರ ಕೋಣೆಯಲ್ಲಿ ಬಿಡದೆ ಕಟ್ಟುತ್ತಿರಲು ಹಸುಗಳು ತಿವಿದು ಬಿದ್ದಿರುವನೋ ಎಂದು ನೋಡುತ್ತಾ ಹುಲ್ಲು ಪುಳ್ಳೆಯು ದೊರಕದಿರಲು ಮನೆಗೆ ಬರಲು ಹೆದರಿ ಹೊರಹೊರಗೆ ಆಡುತ್ತಿರುವನೋ ಲೋಹಿತಾಶ್ವನು ಎಂದು ಬೀದಿಯಲ್ಲಿ ನೋಡಿ ತಡವರಿಸಿ ಕಾಣದೆ ಮರಗುತ್ತ ದುಃಖದಿಂದ ಮನಸ್ಸಿನ ಒಳಗೊಳಗೆ ಸತ್ತುಹುಟ್ಟುತ್ತಿರುವಳು ಚಂದ್ರಮತಿ. ಚಂದ್ರಮತಿ ದುಃಖದಿಂದ ಮಗನು ಯಾವುದಾದರೂ ತೊಂದರೆಗೆ ಒಳಗಾಗಿರುವನು ಎಂದು ಮನಸ್ಸಿನಲೆ ದುಃಖಿಸುವುದನ್ನು ಕಾಣಬಹುದಾಗಿದೆ.

ಕಾಡಿನಲ್ಲಿ ದಾರಿಗೆಟ್ಟನೋ ಹುಲಿ ಹಿಡಿಯಿತೋ ಕಳ್ಳರು ಎತ್ತಿಕೊಂಡು ಹೋದರೋ ಭೂತ ಸಮೂಹ ಹೊಡೆದವೋ ನೀರೊಳಕ್ಕೆ ಬಿದ್ದನೋ ಮರದ ಕೊಂಬೆಯನ್ನು ಏರಿ ಬಿದ್ದನೋ ಹಾವು ಕಚ್ಚಿತೋ ತುಂಬ ಹಸಿದು ನಡೆ ಕೆಟ್ಟು ನಿಂತನೋ ಲೋಹಿತಾಶ್ವನು ಎಂದು ಈ ರೀತಿಯಾದ ತೊಂದರೆ ಒಳಗಾಗಿ ನನ್ನ ಮಗ ಸತ್ತಿದ್ದಾನೋ, ಬದುಕಿದ್ದಾನೋ, ಜ್ಞಾನತಪ್ಪಿ ಬಿದ್ದಿದ್ದಾನೋ, ಹುಲಿ ತಿಂದಿತೋ, ಹಾವು ಕಚ್ಚಿತೋ ಭೂತ ಸಮೂಹವೇನಾದರೂ ಹೊಡೆದವೊ ಎಂದು ತಾನೆ ತನ್ನಷ್ಟಕ್ಕೆ ತನ್ನ ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ಹೆದರಿ ದುಃಖಿಸುತ್ತಿದ್ದಾಳೆ.

ಮಗ ಬರದ ಕಾರಣಕ್ಕೆ ತನ್ನ ದೇಹದ ಬಗ್ಗೆ ಪರಿವೆ ಇಲ್ಲದ ಹಾಗೆ ಮೈ ಮೇಲಿನ ಬಟ್ಟೆಯನ್ನು ಎದೆಯ ಮೇಲಕ್ಕೆ ಹಾಕಿಕೊಳ್ಳುತ್ತಾ ಬಿಚ್ಚಿಕೊಂಡು ಕೆದರಿದ್ದ ಕೂದಲಿನ ತಲೆಯನ್ನು ಗಳಿಗೆಗಳಿಗೆಗೂ ತುರಿಸಿಕೊಳ್ಳುತ್ತಾ ನೆಟ್ಟದೃಷ್ಟಿಯಲ್ಲಿ ಮಗನ ಬರುವಿಕೆಯನ್ನು ನೋಡುತ್ತ ಕೆನ್ನೆಯ ಮೇಲೆ ಕೈಯನ್ನು ಇಟ್ಟುಕೊಂಡು ಕೆಟ್ಟೆನು ಇನ್ನು ಏನು ಮಾಡುವೆನು ಏನು ಮಾಡುವೆನು ಮಗನ ದಾರಿಯನ್ನು ನೋಡುತ್ತಿರುವುದಕ್ಕೆ ಇಷ್ಟಕ್ಕೇನೆ ಒಡತಿ ಗದರಿಸುವಳು ಎಂದು ಸಿಡಿಮಿಡಿಗೊಂಡು ಮರುಗುತ್ತ ನಿಂತು ಸರ್ರನೆ ನಿಟ್ಟುಸಿರು ಬಿಟ್ಟಳು ಚಂದ್ರಮತಿ. ಮಗನ ಬರುವಿಕೆಗಾಗಿ ದಾರಿ ದಾರಿ ನೋಡು ದೇಹದ ಬಗ್ಗೆ ಪರಿವೆ ಇಲ್ಲದೆ ಕೂದಲನ್ನು ಬಿಚ್ಚಿ ಕಟ್ಟುತ್ತಾ ನಿಮಿಷಕ್ಕೆ ಒಮ್ಮೆ ಏನು ಮಾಡಲಿ ಎಂದು ದಾರಿ ಕಾಣದೆ ಕಂಗೆಟ್ಟು ನಿಂತಿದ್ದನು ನೋಡಿ ಮನೆಯ ಒಡತಿ ಇಷ್ಟಕ್ಕೇನೆ ಗದರಿದಳು ಚಂದ್ರಮತಿ ಎದರಿ ನಿಟ್ಟುಸಿರು ಬಿಡುತ್ತ ಚಂದ್ರಮತಿ ಒಳಗೆ ನಡೆದಳು.

ದಾರಿಯಲ್ಲಿ ಯಾರೆ ಬಂದರು ಲೋಹಿತಾಶ್ವ ಎಂದು ದಾರಿಯಲ್ಲಿ ಯಾರು ನಿಂತರು ಲೋಹಿತಾಶ್ವ ಎಂದು ಗಾಳಿ ಬಂದರು ಲೋಹಿತಾಶ್ವ ಎಂದು ತನ್ನ ದೇಹದ ಮೇಲೆ ಪರಿವೆ ಇಲ್ಲದೆ ಇದ್ದಾಗ ಮಂದ ಬುದ್ದಿಯಾಗಿದ್ದ ಚಂದ್ರಮತಿಯ ಹತ್ತಿರಕ್ಕೆ ಒಬ್ಬ ಲೋಹಿತಾಶ್ವನ ಜೊತೆಗಾರ ಬಂದು ಇಂದು ನಾವೆಲ್ಲ ಒಟ್ಟಿಗೆ ಹೋಗಿದ್ದೆವು ಲೋಹಿತಾಶ್ವನಿಗೆ ಒಂದು ಉಗ್ರ ಹಾವು ಕಚ್ಚಿ ಆತ ಜೀವವನ್ನು ಬಿಟ್ಟನು ಎಂದು ಜೊತೆಗಾರ ಹೇಳಿದನು. ಲೋಹಿತಾಶ್ವ ದಾರಿ ಕಾಯುತ್ತಿದ್ದ ತಾಯಿಗೆ ಅವನ ಜೊತೆಗಾರರು ಬಂದು ಲೋಹಿತಾಶ್ವನಿಗೆ ಹಾವು ಕಚ್ಚಿದ ವಿಷಯವನ್ನು ಹೇಳಿದರು.

ಚಂದ್ರಮತಿಗೆ ಲೋಹಿತಾಶ್ವನ ಸ್ನೇಹಿತರು ಹೇಳಿದ ತಕ್ಷಣವೇ ಏಕೆ ಕಚ್ಚಿತು, ಯಾವ ಕಡೆ ಯಾವ ಜಾಗದಲ್ಲಿ ಎಂದು ಕೇಳುತ್ತಾ ಅಯ್ಯೋ ಕುಮಾರನು ಸತ್ತ ಸ್ಥಳ ಎಷ್ಟು ದೂರ ಎಂದು ಕೇಳಲು ಆ ಹುಡುಗ ಈ ಕಡೆಯಲ್ಲಿ ಈ ಹೊಲದಲ್ಲಿ ಈ ಮರದ ಪಕ್ಕದ ಹುತ್ತದ ಹುಲ್ಲನ್ನು ಕೊಯ್ಯಲು ಕೈಯನ್ನು ಹಾಕಿದಾಗ ಹಾವು ಕಚ್ಚಲು ಬಿದ್ದನು ಎನ್ನಲು ಚಂದ್ರಮತಿ ದೂರವೇ ಎನ್ನಲು ಆ ಹುಡುಗ ಅಲ್ಲಲ್ಲ ಬೇಕಾದರೆ ಈಗ ಹೋಗು ಅಲ್ಲದಿದ್ದರೆ ಬಳಿಕ ಅನೇಕ ಕರಡಿ ನರಿ ಗೂಬೆ ತೋಳಗಳು ಎಳೆಯದೆ ಬಿಡವು

ಎಂದು ಆ ಮಕ್ಕಳು ಹೇಳುತ್ತಾರೆ. ಚಂದ್ರಮತಿಗೆ ಲೋಹಿತಾಶ್ವನ ಸ್ನೇಹಿತರು ಹೇಳಿದ್ದನ್ನು ಕೇಳಿ ಎಲ್ಲಿ ಹೇಗೆ ಎಂದು ಎಲ್ಲಾ ವಿಚಾರಿಸಿ ಆ ಸ್ಥಳ ಎಲ್ಲಿ ಬರುತ್ತದೆ ಎಂದು ವಿಚಾರಿಸಿದಳು. ಬೇಗ ಹೋಗು ಕಾಡುಪ್ರಾಣಿಗಳ ಕಾಟ ಇದೆ ಎಂದು ಹೇಳುತ್ತಾರೆ.

ಒಟ್ಟಿನಲ್ಲಿ ಚಂದ್ರಮತಿ ತನ್ನ ಗಂಡನ ಮಾನ ಉಳಿಸಲು ಒತ್ತೆ ಇದ್ದ ಮನೆಯಲ್ಲಿ ಕೊಟ್ಟ ಎಲ್ಲಾ ಕಷ್ಟಗಳನ್ನು ಅನುಭವಿಸುತ್ತಾ, ಮಗನನ್ನು ಕಳೆದುಕೊಂಡು ದುಃಖವನ್ನು ಹೇಗೆ ಅನುಭವಿಸುತ್ತಾಳೆ ಎಂಬ ಬಗ್ಗೆ ಈ ಚಂದ್ರಮತಿಯ ವಿಲಾಪದಲ್ಲಿ ಕಾಣಬಹುದಾಗಿದೆ. ಹರಿಶ್ಚಂದ್ರನ ಮಹಾನ್‌ಸತ್ಯವಂತನೆಂದು ಚಿತ್ರಿಸುವ ದಾವಂತದಲ್ಲಿ ಚಂದ್ರಮತಿ, ಲೋಹಿತಾಶ್ವರ ಬದುಕನ್ನು ದಾರಿತಪ್ಪಿಸಿಬಿಡುತ್ತದೆ. ಈ ಕಥೆಯಲ್ಲಿ ಕಾಣಿಸುವ ಸರಣಿ ದುಃಖಗಳು ಭಾವನಾತ್ಮಕ ಲೋಲ್ಪಪ್ತತೆಯನ್ನು ಸೃಷ್ಟಿಸಿಬಿಡುತ್ತದೆ.

**ಪರಾಮರ್ಶನ ಗ್ರಂಥಗಳು**


- ರಂಗನಾಥ ಶರ್ಮಾ. ಎನ್. (ಅನು.) (2010). *ರಾಘವಾಂಕನ ಹರಿಶ್ಚಂದ್ರ ಚರಿತ್ರೆ–ಗದ್ಯಾನುವಾದ.* (ಎರಡನೇ ಮುದ್ರಣ). ಕನ್ನಡ ಸಾಹಿತ್ಯ ಪರಿಷತ್.
- ವೆಂಕಣ್ಣಯ್ಯ ಟಿ ಎಸ್. (1931). *ಹರಿಶ್ಚಂದ್ರ ಕಾವ್ಯ ಸಂಗ್ರಹ.* ಗವರ್ನಮೆಂಟ್ ಬ್ರ್ಯಾಂಚ್ ಪ್ರೆಸ್.
- ಸಾವಿತ್ರಿ ಎ ವಿ. (2014, ಏಪ್ರಿಲ್ 6). *ಚಂದ್ರಮತಿಯ ಅಂತರಂಗ.* ವಿಜಯ ಕರ್ನಾಟಕ.
- ಸುಬ್ಬಣ್ಣ ಕೆ. ವಿ. *ರಾಘವಾಂಕನ ಹರಿಶ್ಚಂದ್ರ ಕಾವ್ಯ ಪ್ರವೇಶ.* ಅಕ್ಷರ ಪ್ರಕಾಶನ.